# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ
# ರಾಣೆಬೆನ್ನೂರು

**ಸಿ.ಸಿ.194/2023**

ಪಿರ್ಯಾಧಿ : ಅಬಕಾರಿ ನಿರೀಕ್ಷಕರು
ರಾಣೆಬೆನ್ನೂರು ವಿಭಾಗ.

**ವಿರುದ್ಧ**

ಆರೋಪಿ : ದಿಳ್ಳೆಪ್ಪ ತಂದೆ ಫಕ್ಕೀರಪ್ಪ ಮುದ್ದೇವರ,
ವಯಸ್ಸುಃ 41 ವರ್ಷ, ಸಾಃ ದೇವರಗುಡ್ಡ,
ತಾಃ ರಾಣೆಬೆನ್ನೂರು, ಜಿಃ ಹಾವೇರಿ.

**ದೋಷಾರೋಪಣೆ**

ನಾನು ಶ್ರೀಮತಿ ಅನಿತಾ ಓ.ಎ. ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಹೆಚ್ಚುವರಿ ಜೆಎಂಎಫ್‌ಸಿ, ರಾಣೇಬೆನ್ನೂರು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕ 19.04.2023 ರಂದು ಸಂಜೆ 7.45 ಗಂಟೆಗೆ 2023 ರಂದು ಬಂದ ಖಚಿತ ಮಾಹಿತಿಯ ಮೇರೆಗೆ ರಾಣೆಬೆನ್ನೂರು ಅಬಕಾರಿ ವ್ಯಾಪ್ತಿ ದೇವರ ಗುಡ್ಡ ಗ್ರಾಮದಲ್ಲಿ ಆರೋಪಿಯಾದ ನಿಮ್ಮ ಬೀಡಾ ಅಂಗಡಿಗೆ ದಾಳಿ ಮಾಡಿ ಪರಿಶೀಲಿಸಿದಾಗ ನೀವು ಕೆಂಪು ಚೀಲದಲ್ಲಿ ಯಾವುದೇ ಪರವಾನಗೆ ಇಲ್ಲದೇ 90 ಮಿಲಿಯ 30 ಓರಿಜಿನಲ್ ಚಾಯಿಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಹಾಗೂ 180 ಮಿಲಿಯ 12 ಬ್ಯಾಗ್‌ಪೈಪರ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕೇಟುಗಳು ಒಟ್ಟು 4.86 ಲೀಟರ್ ಮದ್ಯವನ್ನು ಸಂಗ್ರಹ ಮಾಡಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ. 32(1)

ಹಾಗೂ 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದೀರಾ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1: ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ ಅಥವಾ ಅರ್ಥವಾಯಿತೇ ?

ಉತ್ತರ : **ಅರ್ಥವಾಯಿತು .**

ಪ್ರಶ್ನೆ 2: ನೀವು ಈ ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರ : **ವಿಚಾರಣೆಯಾಗಬೇಕಿದೆ.**

(ಮೇಲಿನಂತೆ ಆರೋಪಣೆ ಓದಿ ಹೇಳಿ ಆರೋಪಿಯು ನೀಡಿದ ಉತ್ತರವನ್ನು ನಮೂದು ಮಾಡಿ ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವುದರಿಂದ ವಿಚಾರಣೆಯನ್ನು ನಡೆಯಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ)

ಸಹಿ/-

ದಿನಾಂಕಃ 11/12/2023

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ರಾಣೆಬೆನ್ನೂರು

**ಆರೋಪಿಯ ಸಹಿ**